ವಿದ್ಯಾರ್ಥಿನಿಲಯಗಳ ಮಂಜೂರಾತಿ

1108 (1268) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ):– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಧಾರವಾಡ ಜಿಲ್ಲೆಯ ವ್ಯಾಪ್ತಿಯಲ್ಲಿ ಮೆಟ್ರಿಕ್–ಪೂರ್ವ ಮತ್ತು ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ;

ಆ) ಈ ವಿದ್ಯಾರ್ಥಿನಿಲಯಗಳನ್ನು ಯಾವ ಗ್ರಾಮಗಳಲ್ಲಿ ಆರಂಭಿಸಲಾಗಿದೆ ;

ಇ) ಕಲಘಟಗಿ ಮತಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ವರ್ಗಗಳ ಬಡಜನರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಈವರೆಗು ವಿದ್ಯಾರ್ಥಿಗಳಿಗನುಗುಣವಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸದಿರಲು ಕಾರಣವೇನು ;

ಈ) ಈಗಲಾದರೂ ಕಲಘಟಗಿ ಮತಕ್ಷೇತ್ರದಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗುವುದೇ ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರು):–

ಅ) ಧಾರವಾಡ ಜಿಲ್ಲೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ವಿವರ ಈ ಕೆಳಕಂಡಂತಿದೆ.

1. ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು	43
2. ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು	18
ಒಟ್ಟು	61

ಆ) ಈ ವಿದ್ಯಾರ್ಥಿನಿಲಯಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕಲಘಟಗಿ ಮತಕ್ಷೇತ್ರದಲ್ಲಿ ಈಗಾಗಲೇ 6 ವಿದ್ಯಾರ್ಥಿನಿಲಯಗಳಿದ್ದು, 2007–08ನೇ ಸಾಲಿನಲ್ಲಿ ಕಲಘಟಗಿ ಮತಕ್ಷೇತ್ರದ ತಾವರೆಗೆರೆ ಗ್ರಾಮಕ್ಕೆ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲಾಗಿದೆ.

ಈ) "ಇ" ನಲ್ಲಿ ಉತ್ತರ ನೀಡಿದ್ದರಿಂದ ಅನ್ವಯಿಸುವುದಿಲ್ಲ.

ವಿಧಾನ ಸಭಾ ಸದಸ್ಯರಾದ ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. 1268(ಅ)ಕ್ಕೆ ಅನುಬಂಧ.

ಸಮಾಜ ಕಲ್ಯಾಣ ಇಲಾಖೆ.

ಕ್ರ. ಸಂ.	ತಾಲ್ಲೂಕಿನ ಹೆಸರು	ವಿದ್ಯಾರ್ಥಿನಿಲಯ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು/ಗ್ರಾಮಗಳು
1.	ಧಾರವಾಡ	ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಧಾರವಾಡ ಟೌನ್.
2.		ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಧಾರವಾಡ ಟೌನ್.
3.		ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಧಾರವಾಡ ಟೌನ್.
4.		ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಧಾರವಾಡ ಟೌನ್.
5.		ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಧಾರವಾಡ ಟೌನ್.
6.	ಹುಬ್ಬಳ್ಳಿ	ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹುಬ್ಬಳ್ಳಿ ಟೌನ್.
7.		ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕೋಳಿವಾಡ, ಹುಬ್ಬಳ್ಳಿ ತಾಲ್ಲೂಕು.
8.		ಮೆಟ್ರಿಕ್-ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಹುಣಕಲ್, ಹುಬ್ಬಳ್ಳಿ ತಾಲ್ಲೂಕು.
9.		ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಹುಬ್ಬಳ್ಳಿ ಟೌನ್.
10.		ಮೆಟ್ರಿಕ್-ಪೂರ್ವ ಬಾಲಕರ ಬಿ.ಸಿ ವಿದ್ಯಾರ್ಥಿನಿಲಯ, ಹುಬ್ಬಳ್ಳಿ ಟೌನ್.
11.	ಕಲಘಟಗಿ	ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕಲಘಟಗಿ ಟೌನ್.
12.		ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ,ಸುರಶೆಟ್ಟಿಕೊಪ್ಪ, ಕಲಘಟಗಿ ತಾಲ್ಲೂಕು.
13.		ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ದುಮ್ಮಾಡ ಕಲಘಟಗಿ ತಾಲ್ಲೂಕು.
14.		ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಹುಣಕಲ್, ಕಲಘಟಗಿ ಟೌನ್.
15.		ಮೆಟ್ರಿಕ್-ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಮಿಶ್ರಿಕೋಟಿ, ಕಲಘಟಗಿ ಟೌನ್.
16.	ಕುಂದಗೋಳ	ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕುಂದಗೋಳ ಟೌನ್.
17.	ನವಲಗುಂದ	ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ನವಲಗುಂದ ಟೌನ್.
18.		ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ನವಲಗುಂದ ಟೌನ್.
19.		ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಜಾವೂರ, ನವಲಗುಂದ ತಾಲ್ಲೂಕು.
20.		ಮೆಟ್ರಿಕ್-ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ನವಲಗುಂದ ಟೌನ್.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ :

ಧಾರವಾಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ವಿವರ :

ಕ್ರ. ಸಂ.	ತಾಲ್ಲೂಕಿನ ಹೆಸರು	ವಿದ್ಯಾರ್ಥಿನಿಲಯ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು/ಗ್ರಾಮಗಳು
1.	ಧಾರವಾಡ	ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯ, ಧಾರವಾಡ ಟೌನ್.
2.	ತಾಲ್ಲೂಕು	ಮೆಟ್ರಿಕ್–ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಧಾರವಾಡ ಟೌನ್.
3.		ಮೆಟ್ರಿಕ್–ನಂತರದ ಬಾಲಕರ (ಸ್ನಾತಕೋತ್ತರ) ವಿದ್ಯಾರ್ಥಿನಿಲಯ, ಧಾರವಾಡ ಟೌನ್.
4.		ಮೆಟ್ರಿಕ್–ನಂತರದ ಬಾಲಕಿಯರ (ಸ್ನಾತಕೋತ್ತರ) ವಿದ್ಯಾರ್ಥಿನಿಲಯ, ಧಾರವಾಡ ಟೌನ್.
5.		ಮೆಟ್ರಿಕ್–ನಂತರದ ಬಾಲಕಿಯರ (ವೃತ್ತಿ ಪರ) ವಿದ್ಯಾರ್ಥಿನಿಲಯ, ಧಾರವಾಡ ಟೌನ್.
6.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಧಾರವಾಡ ಟೌನ್.
7.		ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಧಾರವಾಡ ಟೌನ್.
8.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಧಾರವಾಡ ಗರಗ.
9.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಅಳ್ಳಾವರ.
10.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಉಪ್ಪಿನ ಬೆಟಗೇರಿ.
11.	ಹುಬ್ಬಳ್ಳಿ	ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯ, ಹುಬ್ಬಳ್ಳಿ.
12.		ಮೆಟ್ರಿಕ್–ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಹುಬ್ಬಳ್ಳಿ.
13.		ಮೆಟ್ರಿಕ್–ನಂತರದ ಬಾಲಕಿಯರ (ವೃತ್ತಿ ಪರ) ವಿದ್ಯಾರ್ಥಿನಿಲಯ, ಹುಬ್ಬಳ್ಳಿ.
14.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹುಬ್ಬಳ್ಳಿ.
15.		ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಹುಬ್ಬಳ್ಳಿ.
16.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬೈರಿದೇವರಕೊಪ್ಪ.
17.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ರಾಯನಾಳ.
18.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬ್ಯಾಹಟ್ಟಿ.

19.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ನೂಲ್ವಿ.
20.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ವರೂರು.
21.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಅರಳೆಕಟ್ಟೆ.
22.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬ್ಯಾಹಟ್ಟಿ.
23.	ಕಲಘಟಗಿ	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕಲಘಟಗಿ.
24.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ತಬಕದಹೊನ್ನಳ್ಳಿ.
25.		ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ದೇವಿಕೊಪ್ಪ
26.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ತಾವರೆಗೆರೆ.
27.	ಕುಂದಗೋಳ	ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕುಂದಗೋಳ.
28.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕುಂದಗೋಳ ಟೌನ್.
29.		ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕುಂದಗೋಳ.
30.		ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕುಮಡೊಳ್ಳಿ.
31.		ಮೆಟ್ರಿಕ್–ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಗುಡಗೇರಿ.
32.	ನವಲಗುಂದ	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ನವಲಗುಂದ.
33.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಅಣ್ಣಿಗೇರಿ.
34.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಶಿರಕೋಳ.
35.		ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ನವಲಗುಂದ ಟೌನ್.

ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ :

ಕ್ರ. ಸಂ.	ತಾಲ್ಲೂಕಿನ ಹೆಸರು	ವಿದ್ಯಾರ್ಥಿನಿಲಯ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು/ಗ್ರಾಮಗಳು
1.	ಕುಂದಗೋಳ	ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕುಂದಗೋಳ ಪಟ್ಟಣ.
2.	ಧಾರವಾಡ	ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯ, ಧಾರವಾಡ ನಗರ.
3.		ಮೆಟ್ರಿಕ್–ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಧಾರವಾಡ ನಗರ.
4.	ಹುಬ್ಬಳ್ಳಿ	ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯ, ಹುಬ್ಬಳ್ಳಿ ನಗರ.

ಕ್ರ. ಸಂ.	ತಾಲ್ಲೂಕಿನ ಹೆಸರು	ವಿದ್ಯಾರ್ಥಿನಿಲಯ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು/ಗ್ರಾಮಗಳು
1.	ಧಾರವಾಡ	ಮೆಟ್ರಿಕ್–ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಧಾರವಾಡ.
2.	ಹುಬ್ಬಳ್ಳಿ	ಮೆಟ್ರಿಕ್–ನಂತರದ ಬಾಲಕರ ವಿದ್ಯಾರ್ಥಿನಿಲಯ, ಹುಬ್ಬಳ್ಳಿ.

1109 (1138) ಶ್ರೀ ಧ್ರುವನಾರಾಯಣ ಆರ್. (ಸಂತೇಮಾರಳ್ಳಿ) :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೈಸೂರು ನಗರದಲ್ಲಿರುವ ಕೃಷ್ಣರಾಜೇಂದ್ರ ಆಸ್ಪತ್ರೆಯನ್ನು ವಿಸ್ತರಿಸುವ ಯೋಜನೆಯು ಸರ್ಕಾರದ ಮುಂದಿದೆಯೇ ;

ಆ) ಈ ಆಸ್ಪತ್ರೆಯು ಹಳೆಯದಾಗಿದ್ದು ಮಂಡ್ಯ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಹೆಚ್ಚಿನ ರೋಗಿಗಳು ಸಹ ಇಲ್ಲಿ ಚಿಕಿತ್ಸೆ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ವಿ.ಎಸ್. ಆಚಾರ್ಯ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು.

ಆ) ಹೌದು.

ಇ) ಈ ಕೆಳಕಂಡ ವೈದ್ಯಕೀಯ ಸೌಲಭ್ಯಗಳು ಕೆ.ಆರ್. ಆಸ್ಪತ್ರೆಯಲ್ಲಿ ಲಭ್ಯವಿದೆ :

1) ಕ್ಷ–ಕಿರಣ ಯಂತ್ರಗಳನ್ನು ಆಧುನೀಕರಣಗೊಳಿಸಲಾಗಿದೆ.

2) ರೋಗಿಗಳ ಚಿಕಿತ್ಸೆಗಾಗಿ 24 ಗಂಟೆಗಳ ಕೇಂದ್ರೀಯ ಪ್ರಯೋಗಾಲಯವನ್ನು ಪ್ರಾರಂಭಿಸಲಾಗಿದೆ.

3) ಆಸ್ಪತ್ರೆಯಲ್ಲಿ ರಕ್ತ ನಿಧಿ ಕೇಂದ್ರವನ್ನು ನವೀಕರಿಸಲಾಗಿದ್ದು 24 ಗಂಟೆಗಳ ಕಾಲ ರಕ್ತ ನಿಧಿಯ ಸೌಲಭ್ಯವಿರುತ್ತದೆ.

4) ಸಿ.ಟಿ. ಸ್ಕ್ಯಾನ್ ಸೌಲಭ್ಯವನ್ನು ರಿಯಾಯಿತಿ ದರದಲ್ಲಿ ರೋಗಿಗಳಿಗೆ ನೀಡಲಾಗುತ್ತಿದೆ.

5) ಉಚಿತ ಮತ್ತು ರಿಯಾಯಿತಿ ದರದಲ್ಲಿ ಆಸ್ಪತ್ರೆಗೆ ಬರುವ ರೋಗಿಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ.